

ಬರಿಯ ಪಾದ ನೋಯದಂತೆ
ಬೆಸೆದ ಬೆರಳು ಜಾರದಂತೆ...

ಗಾರ್ಡನ್ನು ಜಮಾಲೀ ಕಮಾಲೀ ಮಸೀದಿ ಎಲ್ಲಿದೆ ಎಂದು ಕೇಳಿದಾಗ ನೇರವಾಗಿ ಹೋದರೆ ಸಿಗುವುದೆಂದು ಹೇಳಿದ. ಅಲ್ಲಿ ತಲುಪಿದಾಗ ಕೆಲಸಗಾರನೊಬ್ಬ ಆಗಷ್ಟೇ ಮಸೀದಿಯ ಗೇಟಿನ ಬೀಗವನ್ನು ತೆರೆದು ಪ್ರಾಂಗಣವನ್ನು ಗುಡಿಸುತ್ತಿದ್ದ. ಬೆಳಗಿನ ಸೂರ್ಯನ ಕಿರಣಗಳು ಮಸೀದಿಯ ಕಿಟಕಿಯಿಂದ ಬಂದು ಅಲ್ಲಲ್ಲಿ ಬೆಳಕು ಚೆಲ್ಲಿದ್ದವು. ಹೆಚ್ಚೇನು ದೊಡ್ಡದಲ್ಲದ ಮಸೀದಿಯಲ್ಲಿ ತಕ್ಷಣ ಕಂಡಿದ್ದು ಜಮಾಲೀ ಸಮಾಧಿ.

ಜಮಾಲೀ ಎಂಬವನು ಸುಮಾರು ಐನೂರು ವರ್ಷ ಹಿಂದಿನ ಸಿಕಂದರ್ ಲೋದಿ ಎಂಬ ರಾಜನ ಕಾಲದಲ್ಲಿ ಬದುಕಿದ್ದ ಪ್ರಖ್ಯಾತ ಸೂಫೀ ಸಂತ ಹಾಗೂ ಕವಿ. 'ಜಮಾಲ್' ಎಂದರೆ ಉರ್ದುವಿನಲ್ಲಿ ಸೌಂದರ್ಯ ಎಂದರ್ಥ. ಲೋದಿಯ ನಂತರ ಆಳಿದ ಮುಘಲ್ ಸಾಮ್ರಾಜ್ಯದ ಬಾಬರ್, ಹುಮಾಯುನ್ ಇತ್ಯಾದಿ ರಾಜರೂ ಅಪಾರವಾಗಿ ಮೆಚ್ಚಿದ್ದ ಕವಿ ಜಮಾಲೀ. ಆದರೆ ಈ ಕಮಾಲೀ ಯಾರು? **'This is one of my favorite mysteries'**, ಎಂದು ಮಂದೀಪ್ ಹೇಳಿದ. ಜಮಾಲೀಯ ಸಮಾಧಿಯ ಪಕ್ಕದಲ್ಲೇ ಈ ವ್ಯಕ್ತಿಯ ಸಮಾಧಿ ಇದ್ದರೂ ಇವನು ಯಾರು, ಇವನು ಜಮಾಲೀಗೆ ಏನಾಗಬೇಕೆನ್ನುವುದು ಇಷ್ಟು ವರ್ಷಗಳ ನಂತರವೂ ಇತ್ಯರ್ಥವಾಗಿರಲಿಲ್ಲ. ಮಂದೀಪ್ ಕಮಾಲೀಯ ಸಮಾಧಿಯೆದುರು ಮೌನವಾಗಿ ನಿಂತ. ಜಮಾಲೀ ಕಮಾಲೀಯರ ನಡುವಿನ ಸಂಬಂಧವನ್ನು ಹೆಸರಿಟ್ಟು ಇತ್ಯರ್ಥಗೊಳಿಸಬೇಕೆಂದು ಹಟಹಿಡಿದಿದ್ದ ಜನರ ಬಾಯಲ್ಲಿ ಅವರಿಬ್ಬರು ಪ್ರೇಮಿಗಳಾಗಿದ್ದರು, ಸಖರಾಗಿದ್ದರು, ಕವಿಕವಿಯ ಸ್ಫೂರ್ತಿ ಮತ್ತೇನೇನೋ ಆಗಿದ್ದರು. ಆದರೆ ಕೆಲವರಿಗೆ ಮಂದೀಪ್ ಹೇಳಿದ ಹಾಗೆ ಹೆಸರಿಸಲಾಗದ ವಿಸ್ಮಯವಾಗೇ ಉಳಿದಿದ್ದರು. ಪಾರಿವಾಳಗಳ ಗುಂಪೊಂದು ಪುರ್ರೆಂದು ಮಸೀದಿಯ ನೆತ್ತಿಯ ಮೇಲಿಂದ ಹಾರಿ ಹೋದವು. ಬಿಸಿಲೇರುತ್ತಿತ್ತು. ಮಂದೀಪ್ ತನ್ನ ಡಾನ್ಸ್ ಕ್ಲಾಸಿರುವುದು ನೆನಪುಮಾಡಿಕೊಂಡು ಹೊರಡಬೇಕೆಂದ.

## 'ರೈಖಿಕ್ವೀನ್ ಸೈಜ್' ಎಂಬ ದಿವ್ಯನೃತ್ಯ

ಅಂದು ರಾತ್ರಿ ಇಂಟರ್‌ನೆಟ್‌ನಲ್ಲಿ 'ಮಂದೀಪ್ ರೈಖಿಕ್ವೀನ್ ಸೈಜ್' ಎಂದು ಹುಡುಕಿದೆ. ಒಂದು ಎರಡು ವಿಡಿಯೊ ತುಣುಕಗಳು ಸಿಕ್ಕಿತು. ಮಂದ ಬೆಳಕಿದ್ದ ಚಿಕ್ಕ ಸ್ಟೇಜಿನ ಮಧ್ಯದಲ್ಲೊಂದು ಚಾರ್ಪೋಯ್ ಇಟ್ಟಿದ್ದರು. ಅರೆನಗ್ನವಾಗಿದ್ದ ಇಬ್ಬರು ಗಂಡು ನೃತ್ಯಪಟುಗಳು ಸ್ಟೇಜಿನ ಎರಡು ತುದಿಯಿಂದ ಬಂದು ಏಕಕಾಲಕ್ಕೆ ಚಾರ್ಪೋಯಿನ ಮೇಲೆ ಹಾರಿದರು. ಒಬ್ಬರನ್ನೊಬ್ಬರು ಹಿಡಿದು ನಂತರ ಬಿಡಿಸಿಕೊಂಡರು. ಅವರ ದೇಹದ ಭಾರಕ್ಕೆ ಚಾರ್ಪೋಯ್ ಮಾಡುತ್ತಿದ್ದ ಶಬ್ದ ಎಲ್ಲೆಡೆ ಕೇಳಿಸುತ್ತಿತ್ತು. ಎರಡು ದೇಹಗಳು ಒಂದೇ ಆಗಿಬಿಡುವಂತೆ ಹೆಣೆದುಕೊಳ್ಳುತ್ತಿದ್ದವು, ಸರಸವಾಡುತ್ತಿದ್ದವು. ಕೆಲಹೊತ್ತಾದಮೇಲೆ ಅವು ಎರಡು ಗಂಡು ದೇಹಗಳು ಎಂಬುದು ಮುಖ್ಯವಾಗಲಿಲ್ಲ. ತಮ್ಮ ದೇಹಗಳನ್ನು ಪರಸ್ಪರ ಅರ್ಥೈಸಿಕೊಳ್ಳುತ್ತಾ, ಹೊಂದಾಣಿಕೆಗೆ ಹಂಬಲಿಸುತ್ತಾ ಉಸಿರಾಡುತ್ತಿದ್ದ ಎರಡು ಆಕಾರಗಳಷ್ಟೇ ಆಗಿಬಿಟ್ಟಿದ್ದವು.

## ಕನ್ನಡಿಯಲ್ಲಿ ಕಂಡ ಹಳೆಮುಖ

ಭಾನುವಾರ ಬೆಳಿಗ್ಗೆ ಹನ್ನೊಂದು ಗಂಟೆಗೆ ನನ್ನ ಬೆಂಗಳೂರಿನ ರಿಟರ್ನ್ ಫ್ಲೈಟಿತ್ತು. ಅಂದು ಮುಂಜಾನೆಯ ಕ್ಲಾಸಿದ್ದರಿಂದ ನಾನು ಹೊರಡುವ ಸಮಯದಲ್ಲಿ ಮಂದೀಪ್ ಮನೆಯಲ್ಲಿರಲಿಲ್ಲ. ಬ್ಯಾಗುಗಳನ್ನೆಲ್ಲಾ ಪ್ಯಾಕ್ ಮಾಡಿ ನನ್ನ ಕ್ಯಾಬಿಗೋಸ್ಕರ ಪೋರ್ಟಿಕೋದಲ್ಲಿ ಕೂತು ಕಾಯುತ್ತಿದ್ದೆ. ಪಾಟುಗಳ ಸಂದಿಯಿಂದ ಬೆಕ್ಕಿನ ಕೂಗು ಕೇಳಿಸಿತು. ಹತ್ತಿರ ಹೋದಾಗ ಆಗಷ್ಟೇ ಹುಟ್ಟಿದ್ದ ಎರಡು ಮರಿಗಳನ್ನು ಅತ್ಯಂತ ಎಚ್ಚರದಿಂದ, ತುಸು ಆಯಾಸದಿಂದ ಕಾಯುತ್ತಿದ್ದ ಬೆಕ್ಕನ್ನು ಕಂಡು ರೋಮಾಂಚನವಾಯಿತು.

ನನ್ನ ಮೊಬೈಲಿನಲ್ಲಿ ಅದರ ಫೋಟೊವನ್ನು ತೆಗೆದು ಮಂದೀಪ್‌ಗೆ ಕಳಿಸಿ ಹೋಗಿಬರುತ್ತೇನೆಂದು ಹೇಳಿದೆ. ಕ್ಯಾಬ್ ಬಂದ ಸುದ್ದಿ ತಿಳಿದು ಹೊರಡುತ್ತಿದ್ದಾಗ ರೂಮಿನಲ್ಲಿ ನನ್ನ ಮೊಬೈಲ್ ಚಾರ್ಜರ್ ಮರೆತದ್ದು ನೆನಪಾಗಿ ಒಳಕ್ಕೆ ನಡೆದೆ. ಮೇಜಿನ ಮೇಲೆ ಬಿಟ್ಟಿದ್ದ ಚಾರ್ಜರ್ ಜೇಬಿನೊಳಗಿಟ್ಟುಕೊಂಡೆ. ರೂಮಿನ ಎಲ್ಲೆಡೆ ಮತ್ತೊಮ್ಮೆ ನೋಡಿದಾಗ ಆಚೆಬದಿಯಲ್ಲಿದ್ದ ವಾರ್ಡ್‌ರೋಬಿನ ಮೇಲಿನ ಕನ್ನಡಿಯಲ್ಲಿ ನನ್ನದೇ ಬಿಂಬ ಕಂಡಿತು. ಎಲ್ಲೋ ಕಳೆದು ಹೋಗಿದ್ದ ಹಳೆಯ ಗೆಳೆಯ ಒಂದು ಕ್ಷಣ ಸಿಕ್ಕಂತೆ, ಸಿಕ್ಕೂ ಪೂರ್ತಿ ಗುರುತು ಹತ್ತದೆ ಇರುವಂತೆನಿಸಿತು. ಕ್ವೀನ್ ಸೈಜ್ ಬೆಡ್ಡಿನ ಎದುರಿದ್ದ ದೊಡ್ಡ ವರ್ತುಲಾಕಾರದ ಕಿಟಕಿಯನ್ನು ಪೂರ್ತಿಯಾಗಿ ತೆರೆದು ಹೊರಗೆ ನಡೆದೆ.

ಪ್ರತಿಕ್ರಿಯಿಸಿ: **feedback@sudha.co.in**